ಸರಕಾರಕ್ಕೆ ಇದೆ.

ಆ) ಇಂತಹ ಪ್ರಕರಣಗಳಲ್ಲಿ ಸ್ವಲ್ಪ ಮಟ್ಟಿನ ಏರಿಕೆ ಇದೆ.

ಇ) ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯದ ಪ್ರಕರಣಗಳನ್ನು ಎಸ್.ಪಿ.ದರ್ಜೆಯ ಅಧಿಕಾರಿ ತನಿಖೆ ಮಾಡುತ್ತಾರೆ. ವರದಕ್ಷಿಣೆ ಸಾವಿನ ಪ್ರಕರಣಗಳನ್ನು ಸಿ.ಓ.ಡಿ ತನಿಖೆ ಮಾಡುತ್ತಿದೆ.

ವಿಷಯ :- ಪೆನ್ನಾರ್ ಕಾಲುವೆ ಕೃಷ್ಣ ನದಿ ನೀರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1567 (2346)

ಶ್ರೀ ಬಸನಗೌಡ ಪಾಟೀಲ್(ವಿಜಾಪುರ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ನದಿನೀರನ್ನು ಪೆನ್ನಾರ್ ಕಾಲುವೆಗೆ ಜೋಡಿಸುವ ಬಗ್ಗೆ ಸರ್ವೇಕ್ಷಣ ಕಾರ್ಯ ನಡೆದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಲ್ಲಿ ಸರ್ಕಾರದ ಕ್ರಮಗಳೇನು?

ಇ) ಈ ನದಿ ನೀರನ್ನು ಪೆನ್ನಾರ್ ಕಾಲುವೆಗೆ ಜೋಡಿಸಿದಲ್ಲಿ ರಾಜ್ಯದ ಹಿತಕ್ಕೆ ಧಕ್ಕೆ ಆಗುವುದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯ ಮಂತ್ರಿಗಳು):-

ಅ) ಬಂದಿದೆ

ಆ) ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ ತಯಾರಿಸಿರುವ ಪ್ರಾಥಮಿಕ ತನಿಖಾ ವರದಿ (ಪ್ರಿಫೀಸಿಬಿಲಿಟಿ ರಿಪೋರ್ಟ್)ಯಲ್ಲಿ ಕಂಡು ಬಂದಿರುವ ತಾಂತ್ರಿಕ ನ್ಯೂನತೆಗಳನ್ನು ಸರಿಪಡಿಸುವ ಬಗ್ಗೆ ಸಂಸ್ಥೆಗೆ ಕೋರಲಾಗುತ್ತಿದೆ.

ಇ)ರಾಜ್ಯದ ಹಿತಕ್ಕೆ ಧಕ್ಕೆ ಆಗದಂತೆ ಕಾಪಾಡುವುದು.

ವಿಷಯ :- ಕೃಷ್ಣ ಮೇಲ್ದಂಡೆ ಯೋಜನೆ ಭೂಸ್ವಾಧೀನಾಧಿಕಾರಿಗಳು ಇಲ್ಲದೆ ರೈತರಿಗೆ ತೊಂದರೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1568(758)

ಶ್ರೀ ಬಸನಗೌಡ ಪಾಟೀಲ್(ವಿಜಾಪುರ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ ಯೋಜನೆ ಭೂಸ್ವಾಧೀನಾಧಿಕಾರಿಗಳ ಕಾರ್ಯಾಲಯ ರಾಂಪೂರ ಬಾಗಲಕೋಟೆ ತಾಲ್ಲೂಕು ಇಲ್ಲಿ ಭೂಸ್ವಾಧೀನಾಧಿಕಾರಿಗಳು ಇಲ್ಲದೆ ರೈತರಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮಕ್ಕೆ ಬಂದಿದೆಯೇ.

ಆ)ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು):-

ಅ) ಬಂದಿದೆ

ಆ) ಸೂಕ್ತ ಅಧಿಕಾರಿಯನ್ನು ನೇಮಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ವಿಷಯ:- ಇಂಡಿ ತಾಲ್ಲೂಕಿನ ಏತ ನೀರಾವರಿಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1569(730)

ಶ್ರೀ ಬಸನಗೌಡ ಪಾಟೀಲ್(ವಿಜಾಪುರ):- ಮಾನ್ಯ ಸಣ್ಣನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1)ಇಂಡಿ ತಾಲ್ಲೂಕಿನ ನದಿಯಿಂದ 5 ಏತ ನೀರಾವರಿಗಳು ಪ್ರಾರಂಭದ ಹಂತಕ್ಕೆ ತಡೆಯಾಗಲು ಕಾರಣಗಳೇನು?

2)ಈ ಏತ ನೀರಾವರಿಗಳನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಲೀಲಾದೇವಿ ಆರ್.ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು):-

1) 1995-96ನೇ ಸಾಲಿನ ಆಯವ್ಯಯದಲ್ಲಿ ತದ್ದೆವಾಡಿ ಮತ್ತು ತುಳಜಭವಾನಿ ಹೊಸ ಏತ ನೀರಾವರಿ ಯೋಜನೆಗಳು ಸೇರಿದ್ದು, ಇವುಗಳ ಆರ್ಥಿಕ ಮತ್ತು ತಾಂತ್ರಿಕ ಶಕ್ಯತೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ. ಹಾಲಿ ಇರುವ ಅನಜಿ ಮತ್ತು ಅಗರಖೇಡ ಏತ ನೀರಾವರಿ ಯೋಜನೆಗಳ ರಿಹ್ಯಾಬಿಲಿಟೇಷನ್ ಕೆಲಸಗಳು 1995-96ನೇ ಸಾಲಿನ ಆಯವ್ಯಯದಲ್ಲಿ ಸೇರಿದ್ದು ಇವುಗಳಿಗೆ ಅಂದಾಜನ್ನು ತಯಾರಿಸಲಾಗುತ್ತಿದೆ.

2)ಎರಡು ಹೊಸ ಏತ ನೀರಾವರಿ ಯೋಜನೆಗಳ ಶಕ್ಯತೆಯನ್ನು ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಎರಡು ಏತ ನೀರಾವರಿ ಯೋಜನೆಯ ರಿಹ್ಯಾಬಿಲಿಟೇರ್ಷ ಕಾಮಗಾರಿಯ ಅಂದಾಜಿಗೆ ಅನುಮೋದನೆ ನೀಡಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ:- ರಾಜ್ಯದಲ್ಲಿರುವ ಸರಕಾರಿ ನೌಕರರ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1570(300)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರಕಾರ ಹಾಗೂ ಜಿಲ್ಲಾಪಂಚಾಯತಿಗಳ ವ್ಯಾಪ್ತಿಯಲ್ಲಿರುವ ಸರ್ಕಾರಿ ನೌಕರರ ಒಟ್ಟು ಸಂಖ್ಯೆ ಎಷ್ಟು?

ಆ) ಈ ಸಿಬ್ಬಂದಿಗೆ 1992-93, 1993-94 1994-95ರಲ್ಲಿ ವೆಚ್ಚ ಮಾಡಿದ ವೇತನ ಹಾಗೂ ವಿವಿಧ ಭತ್ಯೆಗಳ ಮೊತ್ತವೆಷ್ಟು?

ಇ)ಈ ಸಿಬ್ಬಂದಿಗೆ 1995-96ರಲ್ಲಿ ಆಯವ್ಯಯ ಪ್ರಕಾರ ನಿಗದಿ ಮಾಡಿದ ಮೊತ್ತವೆಷ್ಟು? ಹಾಗೂ 1-4-1995ರಿಂದ 30-6-1995ರವರೆಗೆ ವೆಚ್ಚ ಮಾಡಿದ ವೇತನ ಹಾಗೂ ವಿವಿಧ ಭತ್ಯೆಗಳ ಮೊತ್ತವೆಷ್ಟು?

ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು):-

ಅ) 1995-96ರ ಅನುಬಂಧ-ಬಿ ಪ್ರಕಾರ ರಾಜ್ಯ ಸರ್ಕಾರದ ಮತ್ತು ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯಲ್ಲಿರುವ ಒಟ್ಟು ಸರ್ಕಾರಿ ನೌಕರರ ಸಂಖ್ಯೆ 6,51,914

ಆ) 1992-93ನೇ ಸಾಲಿನಲ್ಲಿ 1707.65 ಕೋಟಿ ರೂ.ಗಳನ್ನು ವಾಸ್ತವವಾಗಿ ವೇತನ ಮತ್ತು ಇತರ ಭತ್ಯೆಗಳಿಗಾಗಿ ಖರ್ಚು ಮಾಡಲಾಗಿದೆ. 1993-94ನೇ ಸಾಲಿನಲ್ಲಿ 2022.62 ಕೋಟಿ ರೂ.ಗಳನ್ನು ಪರಿಷ್ಕೃತ ಅಂದಾಜಿನಲ್ಲಿ ವೇತನ ಮತ್ತು ಇತರ ಭತ್ಯೆಗಳಿಗಾಗಿ ಅವಕಾಶ ಮಾಡಲಾಗಿದೆ. 1994-95ನೇ